

### ಅಮೂಲ್ಯ ರಾಮಚಂದ್ರ ನಾಯಕ, ಉತ್ತರ ಕನ್ನಡ

ಸರ್ಕಾರವು ಅಂಗವಿಕಲ ಮಕ್ಕಳ ಶಿಕ್ಷಣಕ್ಕೆ ಇನ್ನೂ ಹೆಚ್ಚಿನ ಒತ್ತು ನೀಡುವುದರಿಂದ ಅವರನ್ನು ಮುಖ್ಯವಾಹಿನಿಗೆ ತರಲು ಸಾಧ್ಯವಾಗುತ್ತದೆ ಎಂದು ಅಮೂಲ್ಯ ರಾಮಚಂದ್ರ ನಾಯಕ ಅಭಿಪ್ರಾಯ ಪಡುತ್ತಾಳೆ. ಜಿಲ್ಲಾಧಿಕಾರಿಯಾಗುವ ಆಕಾಂಕ್ಷೆ ಹೊಂದಿರುವ ಈಕೆ ಹಿಮಾಲಯ ಪಿ ಯು ಕಾಲೇಜಿನಲ್ಲಿ ಪ್ರಥಮ ಪಿಯುಸಿ ಅಭ್ಯಸಿಸುತ್ತಿದ್ದಾಳೆ.

### ಮಮತಾ ದ್ಯಾವಪ್ಪ ಚೂರಿ, ಹಾವೇರಿ



ಡಾಕ್ಟರ್ ಆಗಬಯಸುವ ಸಿ.ಎಸ್.ಎಸ್.ಐ ಸ್ನೇಹ ಸದನ ಸಂಸ್ಥೆಯ ಅಸಹಾಯಕ ಹೆಣ್ಣುಮಕ್ಕಳ ಪೋಷಣಾಲಯದಲ್ಲಿ 9ನೇ ತರಗತಿ ಓದುತ್ತಿರುವ ಮಮತಾ ದ್ಯಾವಪ್ಪ ಚೂರಿ, ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯದ ವಿರುದ್ಧ ರಕ್ಷಣೆ ಪಡೆಯುವುದರ ಕುರಿತು ಮಕ್ಕಳಿಗೆ ಅರಿವು ಮೂಡಿಸಬೇಕು ಎಂದು ಸರ್ಕಾರಕ್ಕೆ ಮನವಿ ಮಾಡುತ್ತಿದ್ದಾಳೆ.



### ಭಾಗ್ಯ ನಾಗಪ್ಪ ಮರಗಿ, ಹಾವೇರಿ

ಮಕ್ಕಳಿಗೆ ಇರುವ ಕಾನೂನುಗಳ ಬಗ್ಗೆ ಎಲ್ಲರಿಗೂ ಅರಿವು ಮೂಡಿಸಬೇಕು ಮತ್ತು ಮಕ್ಕಳ ಮೇಲಾಗುತ್ತಿರುವ ದೌರ್ಜನ್ಯದ ವಿರುದ್ಧ ರಕ್ಷಣೆ ನೀಡಬೇಕೆಂದು ಶ್ರೀ ಎಸ್. ಹೆಚ್. ಪಾಟೀಲ ಸರ್ಕಾರಿ ಪ್ರೌಢಶಾಲೆಯಲ್ಲಿ 9ನೇ ತರಗತಿ ವ್ಯಾಸಂಗ ಮಾಡುತ್ತಿರುವ ಭಾಗ್ಯ ನಾಗಪ್ಪ ಮರಗಿ ಅಭಿಪ್ರಾಯ ಪಡುತ್ತಾಳೆ. ಮುಂದೆ ಈಕೆ ಇಂಜನೀಯರ್ ಆಗಬಯಸುತ್ತಾಳೆ.

### ನವರಾಜ್ ಡಿ ಶೆಟ್ಟಿ , ಉಡುಪಿ



ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 7 ನೇ ತರಗತಿ ಓದುತ್ತಿರುವ ನವರಾಜ್ ಮುಂದೆ ಸಿ ಎ ಓದಲು ಇಚ್ಛಿಸುತ್ತಾನೆ. ಶಾಲೆಗಳಲ್ಲಿ ಮಕ್ಕಳಿಗೆ ದೊರೆಯಬೇಕಾದ ಮೂಲಭೂತ ಸೌಕರ್ಯಗಳು ಅದೇಕೆ ಸಿಗುತ್ತಿಲ್ಲ ಎಂದು ಸರ್ಕಾರ ಗಮನಹರಿಸಬೇಕೆಂದು ಬಯಸುತ್ತಾನೆ.



### ರಶ್ಮಿ, ಉಡುಪಿ

ಸರ್ಕಾರಿ ಶಾಲೆಗಳಲ್ಲಿ ಎಲ್ಲಾ ವಿಷಯಗಳಿಗೆ ಪ್ರತ್ಯೇಕ ಶಿಕ್ಷಕರು, ಸಾರಿಗೆ, ಉಚಿತಪ್ರವಾಸ, ಕಂಪ್ಯೂಟರ್ ಶಿಕ್ಷಣ, ಗ್ರಂಥಾಲಯ ಇತ್ಯಾದಿ ಸೌಲಭ್ಯಗಳನ್ನು ನೀಡಬೇಕೆಂದು, ಶಾಸಕರ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 7ನೇ ತರಗತಿ ವ್ಯಾಸಾಂಗ ಮಾಡುತ್ತಿರುವ ರಶ್ಮಿ ಸರ್ಕಾರವನ್ನು ಆಗ್ರಹಿಸುತ್ತಾಳೆ. ಮುಂದೆ ಈಕೆ ಜಿಲ್ಲಾಧಿಕಾರಿ ಆಗಬಯಸುತ್ತಾಳೆ.

### ರಿಯಾ ಜಾರ್ಜ್, ದಕ್ಷಿಣ ಕನ್ನಡ



ದಿವ್ಯ ಜ್ಯೋತಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ 10ನೇ ತರಗತಿ ಓದುತ್ತಿರುವ ರಿಯಾ ಜಾರ್ಜ್ ಉತ್ತಮ ಪತ್ರ್ರಕರ್ತೆಯಾಗುಲು ಇಚ್ಛಿಸುತ್ತಾಳೆ. ದಿನೇ-ದಿನೇ ಮಕ್ಕಳಿಗೆ, ಮುಖ್ಯವಾಗಿ ಹೆಣ್ಣು ಮಕ್ಕಳಿಗೆ ಕಾಡುತ್ತಿರುವ ಅಭದ್ರತೆಯನ್ನು ಹೋಗಲಾಡಿಸಲು ಸರ್ಕಾರ ಯಾವ ರೀತಿಯ ಸುರಕ್ಷತಾ ಕ್ರಮಗಳನ್ನು ಅಳವಡಿಸುತ್ತಿದೆ ಎಂಬುದರ ಬಗ್ಗೆ ತಿಳಿಯಬಯಸುತ್ತಾಳೆ.



### ದೀಕ್ಷಾ ಎಂ, ದಕ್ಷಿಣ ಕನ್ನಡ

ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಶಾಲೆಗಳ ಬಳಿ ಗಾಂಜಾ ಹಾಗು ಇತರೆ ಮಾದಕ ವಸ್ತುಗಳ ಮಾರಾಟ ಯಾವುದೇ ಅಡೆತಡೆಗಳಿಲ್ಲದೆ ಸಾಗುತ್ತಿದೆ. ಇದರಿಂದ ಮಕ್ಕಳ ಆರೋಗ್ಯ ಹಾಗು ಸ್ವಾಸ್ಥ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಹಾಗಾಗಿ ಈ ಬಗ್ಗೆ ಸರ್ಕಾರ ಈ ಕೂಡಲೇ ಕ್ರಮ ಜರುಗಿಸಬೇಕೆಂದು ಒತ್ತಾಯಿಸುವ ದೀಕ್ಷಾ, ಶ್ರೀ ಧ. ಮಂ. ಸೆಕೆಂಡರಿ ಶಾಲೆಯಲ್ಲಿ 9ನೇ ತರಗತಿ ಓದುತ್ತಿದ್ದಾಳೆ. ಈಕೆ ಮುಂದೆ ಇಂಜಿನಿಯರ್ ಆಗಲು ಇಚ್ಛಿಸುತ್ತಾಳೆ.

### ಹೆಚ್.ಇ. ರಮೇಶ್, ಚಿಕ್ಕಮಗಳೂರು



ಸರ್ಕಾರೇತರ ಶಾಲೆಗಳಲ್ಲಿ ಒದಗಿಸುವಂತಹ ಪಠ್ಯೇತ್ತರ ಚಟುವಟಿಕೆಗಳನ್ನು ಸರ್ಕಾರಿ ಶಾಲೆಯ ಮಕ್ಕಳಿಗೂ ಒದಗಿಸಿಕೊಡಬೇಕು ಹಾಗೂ ಉತ್ತಮ ಸೌಕರ್ಯಗಳನ್ನು ಒದಗಿಸಬೇಕು. ಶಾಲೆ ಮತ್ತು ಸಮುದಾಯದಲ್ಲಿ ಮಕ್ಕಳಿಗೆ ಹೆಚ್ಚಿನ ರಕ್ಷಣೆ ಒದಗಿಸಬೇಕು ಎಂಬುದು ಅಜ್ಜಂಪುರ ಶೆಟ್ರು ಸಿದ್ದಪ್ಪ ಸರ್ಕಾರಿ ಪ್ರೌಢಶಾಲೆಯಲ್ಲಿ 9 ನೇ ತರಗತಿ ಓದುತ್ತಿರುವ ಹೆಚ್.ಇ. ರಮೇಶ್‌ನ ಬಯಕೆ.



### ಆರ್ ಸೋನು, ಚಿಕ್ಕಮಗಳೂರು

ಕನ್ನಡ ನೂತನ ವಿದ್ಯಾ ಸಂಸ್ಥೆಯಲ್ಲಿ 10ನೇ ತರಗತಿ ವ್ಯಾಸಂಗ ಮಾಡುತ್ತಿರುವ ಈಕೆ ವೈದ್ಯೆಯಾಗಬೇಕೆಂದು ಇಚ್ಛಿಸುತ್ತಾಳೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಭಿಕ್ಷಾಟನೆ ಹಾಗೂ ಚಿಂದಿ ಆಯುವ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿದೆ. ಈ ಮಕ್ಕಳಿಗೆ ಶಿಕ್ಷಣದ ಜೊತೆಗೆ ವಸತಿ ಸೌಲಭ್ಯಗಳನ್ನು ಕಲ್ಪಿಸಬೇಕು. ಮಕ್ಕಳ ಸಮಸ್ಯೆಗಳನ್ನು ಹೇಳಿಕೊಳ್ಳುವ/ ಬಗೆಹರಿಸಿಕೊಳ್ಳಲು ನಮಗೆ ಇರುವ ವೇದಿಕೆ ಮಕ್ಕಳ ಹಕ್ಕುಗಳ ಗ್ರಾಮ ಸಭೆ. ಆದರೆ ವರ್ಷಕ್ಕೊಮ್ಮೆ ನಡೆಯಬೇಕಾಗಿರುವ ಈ ಸಭೆ ಸಮರ್ಪಕವಾಗಿ ನಡೆಯುತ್ತಿಲ್ಲಾ. ಹಾಗಾಗಿ ಕಡ್ಡಾಯವಾಗಿ ಮಕ್ಕಳ ಹಕ್ಕುಗಳ ಗ್ರಾಮ ಸಭೆಗಳು ನಡೆಸುವಂತೆ ಸರ್ಕಾರ ಗ್ರಾಮ ಪಂಚಾಯ್ತಿಗಳಿಗೆ ಆದೇಶ ಹೊರಡಿಸಬೇಕು ಎಂದು ಎ.ಆರ್.ಸೋನು ಆಗ್ರಹಿಸುತ್ತಾಳೆ.

### ದೀಪ್ತಿ ಡಿ, ಹಾಸನ



ಶ್ರೀ ಕಆವೀರ್ ವಸತಿ ಪ್ರೌಢಶಾಲೆಯಲ್ಲಿ 10ನೇ ತರಗತಿ ಓದುತ್ತಿರುವ ದೀಪ್ತಿ ಡಿ ಶಿಕ್ಷಕಿಯಾಗಬಯಸುತ್ತಾಳೆ. ಹೆಣ್ಣುಮಕ್ಕಳ ಮೇಲಾಗುತ್ತಿರುವ ದೌರ್ಜನ್ಯವನ್ನು ತಡೆಯಲು ಏನು ಕ್ರಮ ಕೈಗೊಳ್ಳುವಿರಿ ಮತ್ತು ಜಯಂತಿಗಳೆಂದು ರಜೆ ನೀಡುವುದನ್ನು ತಪ್ಪಿಸಿ ಕೆಲಸ ಮಾಡಲು ಸೂಚಿಸಿ ಎಂದು ಆಗ್ರಹಿಸುತ್ತಿದ್ದಾಳೆ.



### ಮೋಹನ ಗೋಪಾಲ ಎ ವಿ, ಹಾಸನ

ಬಾಲಕಾರ್ಮಿಕ ಮತ್ತು ಬಾಲ್ಯ ವಿವಾಹ ತಡೆಗೆ ಕಾಯ್ದೆ, ಕಾನೂನುಗಳಿದ್ದರೂ ಸಹ ಈ ಎರಡೂ ಪದ್ಧತಿಗಳನ್ನು ಸಂಪೂರ್ಣವಾಗಿ ನಿಷೇಧಿಸಲು ಸರ್ಕಾರಕ್ಕೆ ಏಕೆ ಸಾಧ್ಯವಾಗುತ್ತಿಲ್ಲ ಎಂದು ಮೋಹನ ಗೋಪಾಲ ಎ ವಿ ಮಾನ್ಯ ಮುಖ್ಯಮಂತ್ರಿಗಳನ್ನು ಪ್ರಶ್ನಿಸಲು ಬಯಸುತ್ತಾನೆ. ಶ್ರೀ ಕಆವೀರ್ ವಸತಿ ಪ್ರೌಢಶಾಲೆಯಲ್ಲಿ 8ನೇ ತರಗತಿ ವ್ಯಾಸಂಗ ಮಾಡುತ್ತಿದ್ದು ಮುಂದೆ ವಿಜ್ಞಾನಿಯಾಗುವ ಕನಸು ಈತನದ್ದು.



**ವರ್ಷ ಜಿ, ಕೊಡಗು**

ಹೆಣ್ಣು ಮಕ್ಕಳ ಮೇಲೆ ಹೆಚ್ಚಾಗುತ್ತಿರುವ ದೌರ್ಜನ್ಯ ತಡೆಯುವ ಕುರಿತು ಮತ್ತು ಕಾನೂನಿನೊಡನೆ ಸಂರ್ಘಷಕ್ಕೊಳಗಾದ ಮಕ್ಕಳ ರಕ್ಷಣೆಯ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲು ಬಯಸುವ ವರ್ಷ, ಶ್ರೀ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ 10ನೇ ತರಗತಿ ಓದುತ್ತಿದ್ದು ಮುಂದೆ ಡಾಕ್ಟರ್ ಆಗುವ ಬಯಕೆ ಹೊಂದಿದ್ದಾಳೆ.

**ಚಿನ್ಮಯಿ ಆರ್, ಕೊಡಗು**



ಶ್ರೀ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ 10ನೇ ತರಗತಿ ಓದುತ್ತಿರುವ ಚಿನ್ಮಯಿ ಆರ್ ಸಿವಿಲ್ ಇಂಜಿನಿಯರ್ ಆಗಬಯಸುತ್ತಾನೆ. ಈತ ಅಂಗನವಾಡಿಗಳಲ್ಲಿ ಎದ್ದು ಕಾಣುವ ಸೌಲಭ್ಯದ ಕೊರತೆಯ ಬಗ್ಗೆ ಸರ್ಕಾರದ ಗಮನಸೆಳೆಯಲು ಇಚ್ಛಿಸುತ್ತಾನೆ.



**ಭೀಮರಾಜ್, ಮೈಸೂರು**

ಮಕ್ಕಳಿಗೆ ಶಾಲೆಯಲ್ಲಿ ಉತ್ತಮ ಮೂಲಭೂತ ಸೌಕರ್ಯಗಳನ್ನು ಒದಗಿಸುವುದರಿಂದ ಶಾಲೆಯಿಂದ ದೂರ ಉಳಿದಿರುವ ಮಕ್ಕಳನ್ನು ಹೆಚ್ಚಾಗಿ ಶಾಲೆಯತ್ತ ಸೆಳೆಯಬಹುದು ಮತ್ತು ಶಾಲೆಯಲ್ಲಿ ಈಗಾಗಲೇ ಓದುತ್ತಿರುವ ಮಕ್ಕಳನ್ನು ಶಿಕ್ಷಣ ಮುಂದುವರಿಸುವಂತೆ ಪ್ರೋತ್ಸಾಹಿಸಬಹುದು ಎಂದು 10ನೇ ತರಗತಿ ಓದುತ್ತಿರುವ ಭೀಮರಾಜ್ ಅಭಿಪ್ರಾಯ ಪಡುತ್ತಾನೆ. ಮುಂದೆ ಜಿಲ್ಲಾಧಿಕಾರಿಯಾಗಲು ಬಯಸುತ್ತಾನೆ.

**ಸ್ವಾತಿ ಬಿ ಜೆ, ಮೈಸೂರು**



ನಾಗರೀಕ ಸೇವಾ ಪರೀಕ್ಷೆ ಮತ್ತು ಅದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು 5-10 ನೇ ತರಗತಿಯ ಪಠ್ಯದಲ್ಲಿ ಸೇರಿಸುವುದರಿಂದ ಈ ಕುರಿತ ವಿಚಾರ ವಿನಿಮಯ ಆಗುತ್ತದೆ, ಜೊತೆಗೆ ಮಕ್ಕಳನ್ನು ಸಣ್ಣ ವಯಸ್ಸಿನಿಂದಲೇ ಈ ಪರೀಕ್ಷೆಗಳನ್ನು ತೆಗೆದುಕೊಳ್ಳುವಂತೆ ಪ್ರೋತ್ಸಾಹಿಸಿದಂತೆಯೂ ಆಗುತ್ತದೆ. ಆದ್ದರಿಂದ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಸ್ವಾತಿ ಬಿ ಜೆ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಿದ್ದಾಳೆ. ಎಸ್ ಎಂ ಎಸ್ ಶಾಲೆಯಲ್ಲಿ 9ನೇ ತರಗತಿ ಅಭ್ಯಸಿಸುತ್ತಿರುವ ಈಕೆ ವೈದ್ಯೆಯಾಗಲು ಇಚ್ಛಿಸುತ್ತಾಳೆ.



**ಸುಷ್ಮಿತಾ ಸಿ, ಚಾಮರಾಜನಗರ**

ಅಂಗನವಾಡಿಯಲ್ಲಿ ಪೌಷ್ಟಿಕ ಆಹಾರದ ಕೊರತೆಯನ್ನು ನಿವಾರಿಸಬೇಕು ಮತ್ತು ಬಾಲಕಾರ್ಮಿಕ ಪದ್ಧತಿಯನ್ನು ಸಂಪೂರ್ಣ ನಿಷೇಧಿಸಬೇಕು ಎಂದು ಶ್ರೀ ವಿವೇಕಾನಂದ ಪ್ರೌಢಶಾಲೆಯಲ್ಲಿ 10ನೇ ತರಗತಿ ಓದುತ್ತಿರುವ ಸುಷ್ಮಿತಾ ಸಿ ಸರ್ಕಾರಕ್ಕೆ ಮನವಿ ಮಾಡುತ್ತಿದ್ದಾಳೆ. ಮುಂದೆ ಐ ಎ ಎಸ್ ಅಧಿಕಾರಿಯಾಗುವುದು ಈಕೆಯ ಗುರಿ.

**ಕೆ. ಸುನೀಲ್, ಚಾಮರಾಜನಗರ**



ಶ್ರೀ ಸಿದ್ದಪ್ಪಾಜಿ ಪ್ರೌಢಶಾಲೆಯಲ್ಲಿ 10ನೇ ತರಗತಿ ವ್ಯಾಸಂಗ ಮಾಡುತ್ತಿರುವ ಕೆ ಸುನೀಲ್, ಅಂತಾರಾಷ್ಟ್ರೀಯ ಮಟ್ಟದ ಕ್ರಿಕೆಟ್ ಆಟಗಾರನಾಗುವ ಇಂಗಿತ ಹೊಂದಿದ್ದಾನೆ. ಕಾಡಂಚಿನ ಗ್ರಾಮದ ಶಾಲೆಗಳಿಗೆ ಹೋಗಲು ರಸ್ತೆ, ವಾಹನ ಹಾಗು ಶಿಕ್ಷಕರನ್ನು ನೇಮಿಸುವುದು ಮತ್ತು ಪ್ರೌಢಶಾಲೆಗಳ ಕೊರತೆ ಇರುವ ಗ್ರಾಮಗಳಲ್ಲಿ ಸೂಕ್ತ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸುತ್ತಿದ್ದಾನೆ.



**ಸಹನಾ ಎ. ಎಸ್, ಮಂಡ್ಯ**

ಮಂಡ್ಯ ಜಿಲ್ಲೆಯು ಹೆಣ್ಣು ಭ್ರೂಣಹತ್ಯೆಯಲ್ಲಿ 5ನೇ ಸ್ಥಾನ ಪಡೆದಿರುವುದು ನಾಚಿಕೆ ಪಡುವ ಸಂಗತಿ. ಇದಕ್ಕೆ ಮುಖ್ಯ ಕಾರಣ ಖಾಸಗಿ ನರ್ಸಿಂಗ್ ಹೋಮ್‌ಗಳು ಪ್ರಸವ ಪೂರ್ವ ಲಿಂಗ ಪತ್ತೆಯನ್ನು ಮಾಡಿ ಹೆಣ್ಣು ಭ್ರೂಣಹತ್ಯೆಗೆ ಪ್ರಚೋದನೆ ನೀಡುತ್ತಿರುವುದು ಜೊತೆಗೆ ಗೊಲ್ಲರ ದೊಡ್ಡಿಗಳಲ್ಲಿ ಇಂದಿಗೂ ಋತುಮತಿಯಾದವರನ್ನು, ಬಾಣಂತಿಯರನ್ನು, ಗರ್ಭಿಣಿಯರನ್ನು ಮೂಢನಂಬಿಕೆಯ ಹೆಸರಿನಲ್ಲಿ ಊರ ಹೊರಗಡೆ ಪಾಳು ಮನೆಯಲ್ಲಿ ಇರಿಸುತ್ತಿದ್ದಾರೆ. ಈ ರೀತಿಯ ಕೃತ್ಯಗಳನ್ನು ತಡೆಯಲು ಏನು ಕ್ರಮ ಕೈಗೊಳ್ಳುವಿರಿ ಎಂದು ಸಹನಾ ಎ. ಎಸ್ ಸರ್ಕಾರವನ್ನು ಪ್ರಶ್ನಿಸುತ್ತಿದಾಳೆ. ಸರ್ಕಾರಿ ಪ್ರೌಢಶಾಲೆ, ಆಲೂರುನಲ್ಲಿ 10 ನೇ ತರಗತಿ ಓದುತ್ತಿರುವ ಈಕೆ ಡಾಕ್ಟರ್ ಆಗಬಯಸುತ್ತಾಳೆ.

**ಸ್ಫೂರ್ತಿ ಡಿ ಸಿ, ಮಂಡ್ಯ**



ಮೀಸಲಾತಿಯಿಂದ ಸರ್ಕಾರ ಉದ್ದೇಶಿಸಿದ ಬದಲಾವಣೆ ಬರಲಾರಂಭಿಸಿದೆ. ಆದರೆ, ಮುಂದಿನ ದಿನಗಳಲ್ಲಿ ಮೀಸಲಾತಿ ಪಡೆದವರೇ ಮತ್ತೆ ಮತ್ತೆ ಮೀಸಲಾತಿ ಪಡೆಯುವುದನ್ನು ತಡೆಗಟ್ಟಬೇಕು, ಜಾತಿಬೇಧ ನಿಲ್ಲಿಸಬೇಕು ಎಂದು ಸ್ಫೂರ್ತಿ ಡಿ ಸಿ ಅಭಿಪ್ರಾಯ ಪಡುತ್ತಾಳೆ. ಐ ಎ ಎಸ್ ಅಧಿಕಾರಿಯಾಗುವ ಗುರಿ ಹೊಂದಿರುವ ಈಕೆ ಸೆಂಟ್ ಜೋಸೆಫ್ ಶಾಲೆಯಲ್ಲಿ 9 ನೇ ತರಗತಿ ಓದುತ್ತಿದ್ದಾಳೆ.



**ಶಶಿಧರ್ ಆರ್ ಭಟ್, ಶಿವಮೊಗ್ಗ**

ಸರ್ಕಾರಿ ಶಾಲೆಯಲ್ಲಿ ಓದಿ, 10ನೇ ತರಗತಿಯಲ್ಲಿ ಶೇ. 90ಕ್ಕಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಉಚಿತ ಲ್ಯಾಪ್‌ಟಾಪ್ ಹೀಗೆ ಅನೇಕ ಸೌಲಭ್ಯಗಳನ್ನು ನೀಡುತ್ತಿರುವುದು ಸಂತೋಷದ ಸಂಗತಿ. ಆದರೆ ಇದೇ ಸೌಲಭ್ಯಗಳನ್ನು ಅನುದಾನಿತ ಹಾಗು ಅನುದಾನ ರಹಿತ ಶಾಲೆಗಳಿಗೆ ಏಕೆ ವಿಸ್ತರಿಸುತ್ತಿಲ್ಲ ಎಂಬುದರ ಬಗ್ಗೆ ಸರ್ಕಾರವನ್ನು ಪ್ರಶ್ನಿಸಬಯಸುತ್ತಾನೆ. ಮುಂದೆ ಇಂಜಿನಿಯರ್ ಆಗ ಬಯಸುವ ಶಶಿಧರ್ ಆರ್ ಭಟ್ ಎಂ ಜಿ ಎನ್ ಪ್ರೌಢಶಾಲೆಯಲ್ಲಿ 10ನೇ ತರಗತಿ ಓದುತ್ತಿದ್ದಾನೆ.

**ಜೈರಾಜ್ ಜೆ, ಶಿವಮೊಗ್ಗ**



ಜೈರಾಜ್ ಜೆ, 10ನೇ ತರಗತಿಯನ್ನು ಜಿ ಪಿ ಪಿ ಯು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದು ಮುಂದೆ ಇಂಜಿನಿಯರ್ ಆಗಬಯಸುತ್ತಾನೆ. ಇತ್ತೀಚಿನ ದಿನಗಳಲ್ಲಿ ಖಾಸಗಿ ಮಾಹಿನಿಗಳು ಪ್ರಸಾರ ಮಾಡುವ ಕೆಲವು ಕಾರ್ಯಕ್ರಮಗಳು ಜೀವನವನ್ನು ಅತೀ ರಂಜಿತವಾಗಿ ಬಿಂಬಿಸುತ್ತಿವೆ. ಇವು ವಿದ್ಯಾರ್ಥಿ/ ಮಕ್ಕಳ ಮೇಲೆ ಕೆಟ್ಟ ಪರಿಣಾಮ ಬೀರುತ್ತಿರುವುದರಿಂದ ಇಂತಹ ಕಾರ್ಯಕ್ರಮಗಳನ್ನು ಬಿತ್ತರಿಸದೇ ಇರಲು ಸರ್ಕಾರ ಕ್ರಮಗಳನ್ನು ಕೈಗೊಳ್ಳಬೇಕು ಹಾಗು ಮಾದಕ ವಸ್ತುಗಳು ಮಕ್ಕಳ ಕೈಗೆ ದೊರಕದಂತೆ ನೋಡಿಕೊಳ್ಳಲು ಸರ್ಕಾರ ತೆಗೆದುಕೊಳ್ಳುವ ಕಟ್ಟುನಿಟ್ಟಿನ ಕ್ರಮಗಳ ಬಗ್ಗೆ ಮಾಹಿತಿ ಹಂಚಿಕೊಳ್ಳಬೇಕೆಂದು ಮುಖ್ಯಮಂತ್ರಿಗಳಲ್ಲಿ ಕೇಳಬಯಸುತ್ತಾನೆ.



### ಹರೀಶ್ ಕುಮಾರ್, ದಾವಣಗೆರೆ

ರಾಜ್ಯದಲ್ಲಿ ಕಡಿಮೆಯಾಗುತ್ತಿರುವ ಲಿಂಗಾನುಪಾತವನ್ನು ಹೇಗೆ ಸರಿದೂಗಿಸುವಿರಿ ಎಂದು ಪ್ರಶ್ನಿಸಬಯಸುತ್ತಿದ್ದಾನೆ ಹರೀಶ್ ಕುಮಾರ್. ಶ್ರೀಮತಿ ಎ ಎಂ ಕಾಡಮ್ಮ ವೀರಯ್ಯ ಸರ್ಕಾರಿ ಪ್ರೌಢಶಾಲೆಯಲ್ಲಿ 9ನೇ ತರಗತಿ ಓದುತ್ತಿರುವ ಈತ ಜಿಲ್ಲಾಧಿಕಾರಿಯಾಗಬಯಸುತ್ತಾನೆ.

### ಸುಮಂಗಳ ಎ ಎನ್, ದಾವಣಗೆರೆ



ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ 10ನೇ ತರಗತಿ ಓದುತ್ತಿರುವ ಸುಮಂಗಳ ಎ ಎನ್, ಮುಂದೆ ವೈದ್ಯೆಯಾಗಲು ಇಚ್ಛಿಸುತ್ತಾಳೆ. ವಸತಿ ನಿಲಯಗಳಲ್ಲಿ ಹೆಣ್ಣು ಮಕ್ಕಳ ಮೇಲಾಗುತ್ತಿರುವ ದೌರ್ಜನ್ಯಗಳನ್ನು ತಡೆಯಲು ಏನು ಕ್ರಮ ಕೈಗೊಳ್ಳುವಿರಿ ಎಂದು ಸರ್ಕಾರವನ್ನು ಈಕೆ ಪ್ರಶ್ನಿಸುತ್ತಿದ್ದಾಳೆ.



### ಮಾನಸ ಎಂ, ಚಿತ್ರದುರ್ಗ

ಎಸ್ ಎಸ್ ಎಲ್ ಸಿ ಯಲ್ಲಿ ಉತ್ತಮ ಅಂಕ ಗಳಿಸಿದ ಪ.ಜಾತಿ ಮತ್ತು ಪ.ಪಂಗಡದವರಿಗೆ ನೀಡುವ ಪ್ರೋತ್ಸಾಹ ಧನವನ್ನು ಅದೇ ಮಾನದಂಡದ ಮೇಲೆ ಎಲ್ಲಾ ವರ್ಗದ ಹೆಣ್ಣು ಮಕ್ಕಳಿಗೆ ಏಕೆ ನೀಡಬಾರದು ಮತ್ತು ಈತನ ಪಠ್ಯಕ್ರಮದಲ್ಲಿ ವೃತ್ತಿ ಕೌಶಲಗಳನ್ನು ಬೆಳೆಸುವ ಶಿಕ್ಷಣವನ್ನು ನೀಡುವುದರ ಬಗ್ಗೆ ಸರ್ಕಾರ ಯೋಚಿಸುತ್ತದೆಯೆ ಎಂದು ಹೆಚ್ ಟಿ ಟಿ ಬಾಲಕಿಯರ ಸರ್ಕಾರಿ ಬಾಲಕಿಯರ ಪ್ರೌಢ ಶಾಲೆಯಲ್ಲಿ 10ನೇ ತರಗತಿ ಓದುತ್ತಿರುವ ಮಾನಸ ಎಂ ಸರ್ಕಾರವನ್ನು ಕೇಳುತ್ತಿದ್ದಾಳೆ.

### ಆಶಾ ಬಿ, ಚಿತ್ರದುರ್ಗ



ಸರ್ವೋದಯ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ 10ನೇ ತರಗತಿ ಓದುತ್ತಿರುವ ಆಶಾ ಬಿ ಮುಂದೆ ಜಿಲ್ಲಾಧಿಕಾರಿಯಾಗ ಬಯಸುತ್ತಾಳೆ. ಈಕೆ ಹೆಣ್ಣು ಮಕ್ಕಳ ಮೇಲೆ ಆಗುತ್ತಿರುವ ದೌರ್ಜನ್ಯ ಮತ್ತು ಮಕ್ಕಳ ರಕ್ಷಣೆ ಕುರಿತು ಸರ್ಕಾರ ಕೈಗೊಳ್ಳುವ ಕ್ರಮಗಳು ತಳಮಟ್ಟದವರೆಗೂ ತಲುಪಬೇಕೆಂದು ಆಗ್ರಹಿಸುತ್ತಿದ್ದಾಳೆ.



### ಚಿನ್ಮಯಿ ಎಮ್, ತುಮಕೂರು

ಸಿದ್ಧಗಂಗಾ ಪಿಯು ಕಾಲೇಜಿನಲ್ಲಿ 10ನೇ ತರಗತಿ ಓದುತ್ತಿರುವ ಈ ಹುಡುಗ ಸೈನ್ಯ ಸೇರುವ ಹೆಬ್ಬಯಕೆ ಹೊಂದಿದ್ದಾನೆ. ಜಾತಿ ಹೆಸರಿನಲ್ಲಿ ಮಕ್ಕಳ ಮೇಲಾಗಿತ್ತಿರುವ ದೌರ್ಜನ್ಯಗಳನ್ನು ತಡೆದು ಮಕ್ಕಳಿಗೆ ರಕ್ಷಣೆ ಒದಗಿಸಬೇಕಾಗಿ ಸರ್ಕಾರವನ್ನು ಕೋರುತ್ತಿದ್ದಾನೆ.

### ಸುಮಲತಾ ಎನ್, ತುಮಕೂರು



ಮಕ್ಕಳ ರಕ್ಷಣೆ ಕುರಿತು ಹೆಚ್ಚು ಗಮನ ಹರಿಸಬೇಕು ಎಂದು ಸರ್ಕಾರಕ್ಕೆ ಮನವಿ ಮಾಡುತ್ತಿರುವ ಸುಮಲತಾ ಎನ್ ಶಿಕ್ಷಕಿಯಾಗ ಬಯಸುತ್ತಾಳೆ. ಪ್ರಸ್ತುತ ಎಂಪ್ರಸ್ ಬಾಲಕಿಯರ ಪ್ರೌಢಶಾಲೆಯಲ್ಲಿ 10 ನೇ ತರಗತಿ ಓದುತ್ತಿದ್ದಾಳೆ.



### ಕೀರ್ತಿ ವಿ, ಕೋಲಾರ

ಮಕ್ಕಳ ಮೇಲಾಗುತ್ತಿರುವ ಲೈಂಗಿಕ ಕಿರುಕುಳಗಳನ್ನು ತಡೆಯಲು ತಳಮಟ್ಟದಲ್ಲಿ ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂದು ತಿಳಿದುಕೊಂಡು ಎಲ್ಲೆಡೆ ಪ್ರಚುರಪಡಿಸಬೇಕೆಂಬುದು ಕೀರ್ತಿ ಯ ಆಶಯ. ಈಕೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚಿದಮನಹಳ್ಳಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಳೆ.

### ಎಂ ಜೆ ಕೃತಿಕ, ಚಿಕ್ಕಬಳ್ಳಾಪುರ



ಮಕ್ಕಳ ಗ್ರಾಮಸಭೆಯನ್ನು ಕಡ್ಡಾಯವಾಗಿ ನವೆಂಬರ್ ತಿಂಗಳಿನಲ್ಲಿ ಪ್ರತೀ ಗ್ರಾಮಪಂಚಾಯಿತಿಯಲ್ಲಿ ನಡೆಯುವಂತೆ ಸರ್ಕಾರ ಆದೇಶ ಹೊರಡಿಸಬೇಕು, ಇದರಿಂದ ಮಕ್ಕಳ ಸಮಸ್ಯೆಗಳನ್ನು ಶೀಘ್ರವಾಗಿ ಮತ್ತು ಸ್ಥಳೀಯವಾಗಿ ಬಗೆಹರಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 8 ನೇ ತರಗತಿ ಓದುತ್ತಿರುವ ಎಂ ಜೆ ಕೃತಿಕಳ ಆಶಯ.



### ಪ್ರದೀಪ್, ಚಿಕ್ಕಬಳ್ಳಾಪುರ

ಚಿಂತಾಮಣಿ ತಾಲೂಕಿನ ಎಸ್ ಕೆ ಹಳ್ಳಿಯ ಸರ್ಕಾರಿ ಪ್ರೌಢಶಾಲೆಯಲ್ಲಿ 10 ನೇ ತರಗತಿ ಓದುತ್ತಿರುವ ಪ್ರದೀಪ್ ಅಂಗವಿಕಲ ಮಕ್ಕಳಿಗೆ ಸರ್ಕಾರ ಸೂಕ್ತ ಸೌಲಭ್ಯಗಳನ್ನು ಒದಗಿಸುವ ಮೂಲಕ ಹೆಚ್ಚು ಓದಲು ಪ್ರೇರೇಪಿಸಬೇಕು, ವಿದ್ಯುತ್ ಕಡಿತದ ಸಮಸ್ಯೆಯನ್ನು ಶೀಘ್ರ ಪರಿಹರಿಸುವ ಮೂಲಕ ರಾಜ್ಯದ ಎಲ್ಲಾ ಮಕ್ಕಳಿಗೆ ಇರುಳಿನಲ್ಲಿಯೂ ಅಭ್ಯಾಸ ಮಾಡಲು ಸಹಾಯ ಮಾಡಬೇಕು ಎಂದು ಬಯಸುತ್ತಾನೆ.

### ಸುಷ್ಮಿತಾ ಎನ್, ರಾಮನಗರ



ಎಂ ಹೆಚ್ ಸಮೂಹ ಸಂಸ್ಥೆಯಲ್ಲಿ ಪ್ರಥಮ ಪಿಯುಸಿ ಓದುತ್ತಿರುವ ಸುಷ್ಮಿತಾ ಎನ್, ಸರ್ಕಾರ ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಬೇಕು ಮತ್ತು ಹೆಣ್ಣು ಮಕ್ಕಳ ರಕ್ಷಣೆಗೆ ಹೆಚ್ಚು ಒತ್ತು ಕೊಡಬೇಕೆಂದು ಬಯಸುತ್ತಾಳೆ. ಮುಂದೆ ಈಕೆ ಶಿಕ್ಷಕಿಯಾಗಲು ಇಚ್ಛಿಸುತ್ತಾಳೆ.



### ದೀಕ್ಷಿತ ಕೆ, ರಾಮನಗರ

ಸೆಂಟ್ ಆನ್ಸ್ ಬಾಲಕಿಯರ ಪ್ರೌಢಶಾಲೆಯಲ್ಲಿ 9ನೆ ತರಗತಿ ವ್ಯಾಸಂಗ ಮಾಡುತ್ತಿರುವ ದೀಕ್ಷಿತಾ ಕೆ ಶಿಕ್ಷಣವನ್ನು ಉಚಿತ ಮತ್ತು ಕಡ್ಡಾಯ ಮಾಡಿದ್ದರೂ ಸಹ ಶೇ. 100 ಸಾಕ್ಷರತೆ ಸಾಧಿಸಲು ಏಕೆ ಸಾಧ್ಯವಾಗುತ್ತಿಲ್ಲ ಮತ್ತು ಹೆಣ್ಣು ಭ್ರೂಣ ಹತ್ಯೆಯನ್ನು ಸಂಪೂರ್ಣವಾಗಿ ಹೇಗೆ ತಡೆಗಟ್ಟುವಿರಿ ಎಂದು ಪ್ರಶ್ನಿಸುತ್ತಿದ್ದಾಳೆ. ಮುಂದೆ ಈಕೆ ಸಮಾಜದಲ್ಲಿ ನೊಂದ ಬಡಜನರ ಸೇವೆ ಮಾಡುವ ಗುರಿ ಹೊಂದಿದ್ದಾಳೆ.



### ನೇಹ ಹೆಚ್, ಬೆಂಗಳೂರು ಗ್ರಾಮಾಂತರ

ದೊಡ್ಡಬಳ್ಳಾಪುರದ ಕೊಂಗಾಡಿಯಪ್ಪ ಪ್ರೌಢಶಾಲೆಯಲ್ಲಿ 9 ನೇ ತರಗತಿ ಓದುತ್ತಿರುವ ನೇಹ ಹೆಚ್ ಸರ್ಕಾರ ಶಾಲೆಗಳಲ್ಲಿ ಮಕ್ಕಳ ಮೇಲಾಗುವ ಲೈಂಗಿಕ ದೌರ್ಜನ್ಯಗಳ ತಡೆಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಮತ್ತು ಎಲ್ಲಾ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕು ಎಂದು ಬಯಸುತ್ತಾಳೆ. ಮುಂದೆ ಈಕೆ ವೈದ್ಯೆ ಆಗಬೇಕೆಂದುಕೊಂಡಿದ್ದಾಳೆ.



### ಕೆಂಪರಾಜು ಎನ್, ಬೆಂಗಳೂರು ಗ್ರಾಮಾಂತರ

ದೊಡ್ಡಬಳ್ಳಾಪುರದ ಕೊಂಗಾಡಿಯಪ್ಪ ಪ್ರೌಢಶಾಲೆಯಲ್ಲಿ 9 ನೇ ತರಗತಿ ಓದುತ್ತಿರುವ ಕೆಂಪರಾಜು ಎನ್ ಇಂಜಿನಿಯರ್ ಆಗಬೇಕೆಂದುಕೊಂಡಿದ್ದಾನೆ. ಚಿಕ್ಕಬಳ್ಳಾಪುರ ಜಿಲ್ಲೆಯ ವಿಜಯಪುರ ತಾಲೂಕಿನಲ್ಲಿ ಪಟಾಕಿ ತಯಾರಿಕೆಯಲ್ಲಿ ಮಕ್ಕಳನ್ನು ಬಳಸಿಕೊಳ್ಳಲಾಗುತ್ತಿದೆ, ಈ ಬಗ್ಗೆ ಸರ್ಕಾರ ಕಠಿಣ ಕ್ರಮ ಜರುಗಿಸಬೇಕೆಂದು ಆಗ್ರಹಿಸುತ್ತಿದ್ದಾನೆ.



### ಸಮೀನಾ ಭಾನು, ಬೆಂಗಳೂರು ನಗರ

ಬಿ ಇ ಟಿ ಸುಫಿಯಾ ಹೈ ಸ್ಕೂಲ್, ಬೆಂಗಳೂರಿನಲ್ಲಿ ಓದಿತ್ತಿರುವ ಸಮೀನಾ ಭಾನು, ರಾಜ್ಯದ ಎಲ್ಲೆಡೆ ಬಾಲ್ಯ ವಿವಾಹಗಳನ್ನು ತಡೆಯಬೇಕು ಮತ್ತು ಮಕ್ಕಳಿಗೆ ರಕ್ಷಣೆ ನೀಡಲು ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಮುಖ್ಯಮಂತ್ರಿಗಳನ್ನು, ಸರ್ಕಾರವನ್ನು ಆಗ್ರಹಿಸುತ್ತಿದ್ದಾಳೆ.



### ಮಹೇಶ್, ಬೆಂಗಳೂರು ನಗರ

ಹೆಣ್ಣುಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳು ವರದಿಯಾಗುತ್ತಲೇ ಇವೆ. ಇದನ್ನು ಸಂಪೂರ್ಣವಾಗಿ ತಡೆಗಟ್ಟಲು ಸರ್ಕಾರ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬುದು ಮಹೇಶ್‌ನ ಆಶಯ. ಈತ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಗಾಂಧಿಪುರದಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ.



### ಧನಲಕ್ಷ್ಮೀ ಎಸ್, ಬೆಂಗಳೂರು ನಗರ

ನೇತಾಜಿ ಸುಭಾಷ್ ಚಂದ್ರ ಬೋಸ್ ಶಾಲೆಯಲ್ಲಿ 9ನೇ ತರಗತಿ ಓದುತ್ತಿರುವ ಮುಂದೆ ಎಂಜಿನಿಯರ್ ಆಗುವ ಕನಸಿರುವ ಧನಲಕ್ಷ್ಮೀ ಎಸ್, ರಾಜ್ಯದ ಹೆಣ್ಣು ಮಕ್ಕಳ ರಕ್ಷಣೆಯನ್ನು ಸರ್ಕಾರ ನಿಶ್ಚಿತ ಮನಸ್ಸಿನಿಂದ ಮಾಡಬೇಕೆಂದು ಬಯಸುತ್ತಾಳೆ.



### ಭರತ್, ಬೆಂಗಳೂರು ನಗರ

ಮಕ್ಕಳಲ್ಲಿ ಹೆಚ್ಚಾಗುತ್ತಿರುವ ಅಪೌಷ್ಠಿಕತೆಯನ್ನು ತಡೆಯಲು ಸರ್ಕಾರ ದೃಢ ಕ್ರಮಗಳನ್ನು ಕೈಗೊಳ್ಳಬೇಕೆಂದು ಸೆಂಟ್ ಜೋಸೆಫ್ ಶಾಲೆಯಲ್ಲಿ 10ನೇ ತರಗತಿ ಓದುತ್ತಿರುವ ಭರತ್ ಆಶಿಸುತ್ತಾನೆ.



### ಶ್ರೀಕಾಂತ್, ಬೆಂಗಳೂರು ನಗರ

ಒಂಬತ್ತನೇ ತರಗತಿಗೆ ಪ್ರವೇಶಾತಿ ದೊರೆಯದ ಕಾರಣ ಪ್ರಸ್ತುತ ಶಾಲೆಯಿಂದ ಹೊರಗುಳಿದಿರುವ ಶ್ರೀಕಾಂತ್, ಶಾಲೆಗೆ ಹೋಗಿ ಕಲಿಯಬೇಕೆಂಬ ಮಹದಾಸೆಯೊಂದಿದ್ದಾನೆ. ಶಾಲೆಗಳಲ್ಲಿ ಶೌಚಾಲಯ ನಿರ್ಮಾಣ ಮತ್ತು ಸಮನ್ವಯ ಶಿಕ್ಷಣಕ್ಕೆ ಸರ್ಕಾರ ಹೆಚ್ಚು ಒತ್ತು ಕೊಡಬೇಕೆಂದು ಈತ ಆಗ್ರಹಿಸುತ್ತಾನೆ.



### ರಂಜಿತಾ ಎನ್ ಎಸ್, ಬೆಂಗಳೂರು ನಗರ

ಹೆಣ್ಣು ಮಕ್ಕಳ ಅನೇಕ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಹೆಣ್ಣು ಮಕ್ಕಳ ಅಭಿವೃದ್ಧಿಗೆ ಪೂರಕವಾಗುವ ಕಾರ್ಯಕ್ರಮಗಳು ಇವೆ ಎಂದು ಗೊತ್ತಿದ್ದರೂ, ಅವುಗಳ ಜಾರಿ ಸಮರ್ಪಕವಾಗಿ ಆಗುತ್ತಿಲ್ಲವೇಕೆ ಎಂಬುದು ಮುಂದೆ ಜಿಲ್ಲಾಧಿಕಾರಿಯಾಗಬೇಕೆಂದು ಬಯಸುವ ಮತ್ತು ಈಗ ಸರ್ಕಾರಿ ಪ್ರೌಢಶಾಲೆಯಲ್ಲಿ 10ನೇ ತರಗತಿ ಓದುತ್ತಿರುವ ರಂಜಿತಾಳನ್ನು ಕಾಡುತ್ತಿರುವ ವಿಚಾರ.



### ಶ್ರೀವಾಣಿ ಎಂ, ಬೆಂಗಳೂರು ನಗರ

ಸರ್ಕಾರೇತರ ಶಾಲೆಗಳಂತೆ ಸರ್ಕಾರಿ ಶಾಲೆಗಳಲ್ಲೂ ಪ್ರಾಥಮಿಕ ಹಂತದಿಂದ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ನೀಡಬೇಕು ಆದರೆ ಮಾತೃಭಾಷೆಯನ್ನು ಕಡೆಗಣಿಸಬಾರದು ಎಂಬುದು ಸರ್ಕಾರಿ ಪ್ರೌಢಶಾಲೆ ಚಿಕ್ಕಜಾಲದಲ್ಲಿ 10ನೇ ತರಗತಿ ವ್ಯಾಸಂಗ ಮಾಡುತ್ತಿರುವ ಶ್ರೀವಾಣಿಯ ಅಭಿಪ್ರಾಯ.



### ಪ್ರಭಾವತಿ ಎ, ಬೆಂಗಳೂರು ನಗರ

ಸರ್ಕಾರಿ ಪ್ರೌಢಶಾಲೆ, ಚಿಕ್ಕಜಾಲದಲ್ಲಿ 10ನೇ ತರಗತಿ ಓದುತ್ತಿರುವ ಪ್ರಭಾವತಿ ಎ, ಸಿವಿಲ್ ಇಂಜಿನಿಯರ್ ಆಗಬಯಸುತ್ತಾರೆ. ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಗ್ರಂಥಾಲಯ ಮತ್ತು ಕಂಪ್ಯೂಟರ್ ತರಬೇತಿ ನೀಡಲು ಕಡ್ಡಾಯವಾಗಿ ಶಿಕ್ಷಕರನ್ನು ನೇಮಿಸಬೇಕು ಎಂದು ಅಪೇಕ್ಷೆ ಪಡುತ್ತಾಳೆ.



### ಕುಮಾರ್, ಬೆಂಗಳೂರು ನಗರ

ನಗರದಲ್ಲಿ ವಿದ್ಯುತ್ ಕಡಿತದ ಸಮಸ್ಯೆ ಹೆಚ್ಚಾಗಿರುವುದರಿಂದ ವಿದ್ಯಾರ್ಥಿಗಳಿಗೆ ಹೆಚ್ಚು ಸಮಸ್ಯೆಯಾಗುತ್ತಿದೆ. ಈ ಕುರಿತು ಸರ್ಕಾರ ಶೀಘ್ರವಾಗಿ ಕ್ರಮ ಜರುಗಿಸಬೇಕು ಎಂದು ಬೆಂಗಳೂರಿನ ಸಮರ್ಥನಂ ಪ್ರೌಢಶಾಲೆಯಲ್ಲಿ 10ನೇ ತರಗತಿ ಓದುತ್ತಿರುವ ಕುಮಾರ್ ಅಭಿಪ್ರಾಯ ಪಡುತ್ತಾನೆ. ಮುಂದೆ ಈತ ಗಣಿತಶಾಸ್ತ್ರಜ್ಞನಾಗಬಯಸುತ್ತಾನೆ.



### ಜಯಶ್ರೀ, ಬೆಂಗಳೂರು ನಗರ

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 7ನೇ ತರಗತಿ ಓದುತ್ತಿರುವ ಜಯಶ್ರೀ ಹೆಣ್ಣು ಮಕ್ಕಳ ಮೇಲಾಗುತ್ತಿರುವ ಅತ್ಯಾಚಾರಗಳನ್ನು ತಡೆಯಲು ಸರ್ಕಾರ ತೆಗೆದುಕೊಳ್ಳುವ ಕ್ರಮಗಳ ಬಗ್ಗೆ ತಿಳಿಯಬಯಸುತ್ತಾಳೆ. ಮುಂದೆ ಈಕೆ ಪತ್ರಕರ್ತೆಯಾಗಲಿಚ್ಛಿಸುತ್ತಾಳೆ.

## ಮಕ್ಕಳ ಹಕ್ಕುಗಳ ಸಂಸತ್ '15

### ಜಿಲ್ಲಾ ಮಟ್ಟದ ಮಕ್ಕಳ ಹಕ್ಕುಗಳ ಸಂಸತ್ ಕಾರ್ಯಕ್ರಮಕ್ಕಾಗಿ ತರಬೇತುದಾರರ ತರಬೇತಿ

ಕರ್ನಾಟಕ ರಾಜ್ಯಮಟ್ಟದ ಮಕ್ಕಳ ಹಕ್ಕುಗಳ ಸಂಸತ್ ಜರಗುವುದಕ್ಕೆ ಸುಮಾರು ಆರು ತಿಂಗಳು ಮೊದಲಿನಿಂದಲೇ ವಿವಿಧ ಹಂತಗಳಲ್ಲಿ ತಯ್ಯಾರಿ, ಪ್ರಕ್ರಿಯೆಗಳು ನಡೆಯುತ್ತದೆ. ತಾಲ್ಲೂಕು ಮಟ್ಟದಲ್ಲಿ ಮಕ್ಕಳ ಹಕ್ಕುಗಳ ಸಂಸತ್ ಮತ್ತು ಜಿಲ್ಲಾ ಮಟ್ಟದಲ್ಲಿ ಮಕ್ಕಳ ಹಕ್ಕುಗಳ ಸಂಸತ್ ಆಯೋಜಿಸುವುದು, ವಿವಿಧ ಹಿನ್ನೆಲೆಯ ಮಕ್ಕಳನ್ನು ಜೊತೆಗೂಡಿಸುವುದು ಮತ್ತು ಜಾಲವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸುವುದು ಹೀಗೆ ಅನೇಕ ಚಟುವಟಿಕೆಗಳನ್ನು ನಿರ್ವಹಿಸಲು ಸೂಕ್ತ ಸಂಪನ್ಮೂಲ ವ್ಯಕ್ತಿಗಳ ಅವಶ್ಯಕತೆ ಇರುತ್ತದೆ. ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಮುಖ್ಯ ಆಯೋಜಕರಾದ ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರದ ಸಂಚಾಲನಾ ಕೇಂದ್ರದಿಂದಲೇ ಸಂಪನ್ಮೂಲ ವ್ಯಕ್ತಿಗಳನ್ನು ನಿಯೋಜಿಸುವುದು ಕಷ್ಟವಾಗುತ್ತದೆ. ಈ ನಿಟ್ಟಿನಲ್ಲಿ 2015-16ರಲ್ಲಿ ನಿಗಾ ಕೇಂದ್ರದ ಸಂಚಾಲನಾ ಕೇಂದ್ರವು ರಾಜ್ಯದ ಮೂರು ವಲಯಗಳಲ್ಲಿ ಅಂದರೆ ಕಲಬುರ್ಗಿ, ಬೆಳಗಾವಿ ಮತ್ತು ಬೆಂಗಳೂರು ವಲಯಗಳಲ್ಲಿ ತರಬೇತುದಾರರ ತರಬೇತಿಯನ್ನು ನಡೆಸಿತು (ಮೈಸೂರು ವಿಭಾಗದಲ್ಲಿ ಈಗಾಗಲೇ ಸಂಪನ್ಮೂಲ ವ್ಯಕಿಗಳು ತಯಾರಿದ್ದರು). ಜಿಲ್ಲಾ ಮಟ್ಟದಲ್ಲಿ ಸಂಪನ್ಮೂಲ ವ್ಯಕ್ತಿಗಳನ್ನು ಸಿದ್ಧಪಡಿಸುವುದು, ತಾಲ್ಲೂಕು ಮಟ್ಟದ ಮಕ್ಕಳ ಹಕ್ಕುಗಳ ಸಂಸತ್ ಜರುಗುವಂತೆ ಮಾಡುವುದು ಹಾಗೂ ಜಾಲವ್ಯವಸ್ಥೆಯನ್ನು ಬಲಪಡಿಸುವುದು ಈ ತರಬೇತಿಯ ಪ್ರಮುಖ ಉದ್ದೇಶವಾಗಿತ್ತು. ಪ್ರತೀ ವಿಭಾಗದಿಂದ 20 ಕ್ಕೂ ಹೆಚ್ಚು ಸದಸ್ಯರು ಭಾಗವಹಿಸಿದ್ದರು. 2015ರ ಮಕ್ಕಳ ಹಕ್ಕುಗಳ ಸಂಸತ್ ವಿಚಾರವು "ಮಕ್ಕಳ ಹಕ್ಕುಗಳ ರಕ್ಷಣೆ" ವಿಚಾರವಾಗಿದ್ದರಿಂದ ತರಬೇತಿಗೆ ಬಂದವರಿಗೆ ಮಕ್ಕಳ ರಕ್ಷಣೆಯ ವಿಚಾರಗಳ ಕಾನೂನು ಮತ್ತು ರಕ್ಷಣಾ ಪ್ರಕ್ರಿಯೆಗಳ ಬಗ್ಗೆಯೂ ಮಾಹಿತಿ ನೀಡಲಾಗಿತ್ತು. ತರಬೇತಿಗೆ ಬಂದಿದ್ದ ಬಹಳಷ್ಟು ಸದಸ್ಯರುಗಳೇ ಸಂಪನ್ಮೂಲ ವ್ಯಕ್ತಿಗಳಾಗಿ ತಮ್ಮ ತಮ್ಮ ಜಿಲ್ಲೆಗಳಲ್ಲಿ "ಮಕ್ಕಳ ಹಕ್ಕುಗಳ ಸಂಸತ್"ನ ಯಶಸ್ವಿ ಆಯೋಜಕರಾಗಿದ್ದರು. ರಾಜ್ಯಮಟ್ಟದ ಸಂಸತ್‌ಗೆ ಬಂದಿದ್ದ ಮಕ್ಕಳು ನೀಡಿದ ಹಿಮ್ಮಾಹಿತಿಯ ಪ್ರಕಾರ ಜಿಲ್ಲಾ ಮಟ್ಟದ ಮಕ್ಕಳ ಹಕ್ಕುಗಳ ಸಂಸತ್ ನಡೆಸಿದ ಸಂಪನ್ಮೂಲ ವ್ಯಕ್ತಿಗಳು "ಮಕ್ಕಳ ಸ್ನೇಹಿ"ಗಳಾಗಿದ್ದರು. ತರಬೇತುದಾರರಿಗೆ ತರಬೇತಿ ನಡೆಸಿದ್ದರಿಂದ ನಿಗಾ ಕೇಂದ್ರದೊಡನೆ ರಾಜ್ಯದಾದ್ಯಂತ 20ಕ್ಕೂ ಹೆಚ್ಚು ಮಕ್ಕಳ ಸ್ನೇಹೀ ಸಂಪನ್ಮೂಲ ವ್ಯಕ್ತಿಗಳು ಇದ್ದಾರೆ.

### ಮಕ್ಕಳ ಹಕ್ಕುಗಳ ಸಂಸತ್ '15ರ ಜಿಲ್ಲಾ ಮಟ್ಟದ ಪ್ರಕ್ರಿಯೆ

2015ರ ಮಕ್ಕಳ ಹಕ್ಕುಗಳ ಸಂಸತ್ ಬಹಳ ಉತ್ಸಾಹದಿಂದ ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನಲ್ಲಿ ದಿನಾಂಕ 19.09.2015ರಂದು ಪ್ರಾರಂಭವಾಯಿತು. ಗದಗ, ಚಾಮರಾಜನಗರ, ಉಡುಪಿ, ದಕ್ಷಿಣ ಕನ್ನಡ ಮತ್ತು ಬೆಂಗಳೂರು ನಗರ ಜಿಲ್ಲೆಗಳಲ್ಲಿ ತಾಲ್ಲೂಕು ಮಟ್ಟದಲ್ಲಿ ಮಕ್ಕಳ ಹಕ್ಕುಗಳ ಸಂಸತ್ ಏರ್ಪಡಿಸಲಾಗಿತ್ತು. ಇದರಿಂದಾಗಿ ಈ ಜಿಲ್ಲೆಗಳ ಮಕ್ಕಳ ರಕ್ಷಣೆಯ ಬಗ್ಗೆ/ ಮಕ್ಕಳ ಹಕ್ಕುಗಳ ಬಗ್ಗೆ ಗ್ರಾಮಗಳು ಹಾಗೂ ಹೋಬಳಿಗಳ ಮಟ್ಟದಲ್ಲೂ ಚರ್ಚೆಗಳಾಗಿ ಮಕ್ಕಳ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಿದಂತಾಗಿದೆ. ಪ್ರತಿಯೊಂದು ಜಿಲ್ಲೆಯಲ್ಲೂ ಮಕ್ಕಳ ಹಕ್ಕುಗಳ ಸಂಸತ್ ಕಾರ್ಯಕ್ರಮದ ಉದ್ಘಾಟನೆಗೆ ಸ್ಥಳೀಯ ಶಾಸಕರು/ಕ್ಷೇತ್ರ ಶಿಕ್ಷಣಾಧಿಕಾರಿಗಳು / ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಮತ್ತು ಇತರೆ ಸರ್ಕಾರಿ ಅಧಿಕಾರಿಗಳನ್ನು ಆಹ್ವಾನಿಸಲಾಗಿತ್ತು. ಉಳಿದಂತೆ ಬಹಳಷ್ಟು ಜಿಲ್ಲೆಗಳಲ್ಲಿ ಇಲಾಖೆಯ ಅಧಿಕಾರಿಗಳು ಭಾಗವಹಿದ್ದರು. ರಾಮನಗರ, ಗದಗ, ರಾಯಚೂರು, ಕೊಡಗು ಜಿಲ್ಲೆಗಳಲ್ಲಿ 'ಜಿಲ್ಲಾ ಮಕ್ಕಳ ರಕ್ಷಣಾ ಘಟಕ'ಗಳು ಮತ್ತು ಬಳ್ಳಾರಿಯಲ್ಲಿ ಮಕ್ಕಳ ಕಲ್ಯಾಣ ಸಮಿತಿಯು ಜಿಲ್ಲಾ ಮಟ್ಟದ ಮಕ್ಕಳ ಹಕ್ಕುಗಳ ಸಂಸತ್ ಆಯೋಜಿಸಲು ಸಂಪೂರ್ಣ ಸಹಕಾರ ನೀಡಿದ್ದು ನಿಗಾ ಕೇಂದ್ರದ ಹುಮ್ಮಸ್ಸನ್ನು ಹೆಚ್ಚಿಸಿದೆ.

> ಉಡುಪಿ ಜಿಲ್ಲೆಯಲ್ಲಿ ಮಾನ್ಯ ನಗರಾಭಿವೃದ್ಧಿ ಸಚಿವರಾದ
> ಶ್ರೀಯುತ ವಿನಯಕುಮಾರ್ ಸೊರಕೆ ರವರು
> ಮತ್ತು
> ಬೀದರ್ ಜಿಲ್ಲೆಯಲ್ಲಿ ವಿಧಾನ ಪರಿಷತ್ ಸದಸ್ಯರಾದ
> ಶ್ರೀಯುತ ರಘುನಾಥರಾವ್ ಮಲ್ಕಾಪೂರೆ ರವರು
> ಭಾಗವಹಿಸಿ ಮಕ್ಕಳ ಪ್ರಶ್ನೆಗಳಿಗೆ ಸ್ಥಳದಲ್ಲಿಯೇ
> ಸ್ಪಂದಿಸಿರುವುದು ಉತ್ತಮ ಉದಾಹರಣೆಯಾಗಿದೆ.

ಮಕ್ಕಳ ಹಕ್ಕುಗಳ ಸಂಸತ್ 8 ವರ್ಷಗಳಿಂದ ನಡೆದುಬಂದಿದ್ದು, ಕಳೆದ 5 ವರ್ಷಗಳಲ್ಲಿ ಈ ಕಾರ್ಯಕ್ರಮಕ್ಕೆ ಹೆಚ್ಚಿನ ಪ್ರಚಾರ ದೊರೆತಿದ್ದು, ಇದರಿಂದ ಹೆಚ್ಚು ಹೆಚ್ಚು ಮಕ್ಕಳು ಕಾರ್ಯಕ್ರಮದಲ್ಲಿ ಭಾಗವಹಿಸಲು ಉತ್ಸುಕರಾಗಿದ್ದರು. ಬೀದರ್, ರಾಮನಗರ, ಉಡುಪಿ, ಕಲಬುರಗಿ, ಕೊಪ್ಪಳ, ಬೆಂಗಳೂರು ನಗರ ಮತ್ತು ಕೊಡಗು ಜಿಲ್ಲೆಗಳಲ್ಲಿ 50-80ರಷ್ಟು ಮಕ್ಕಳು ಭಾಗವಹಿಸಿದ್ದು, ಉಳಿದ ಜಿಲ್ಲೆಗಳಲ್ಲಿ 30ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು. ತಾಲ್ಲೂಕು ಮಟ್ಟದಲ್ಲಿ ಆಯ್ಕೆಯಾದ ಮಕ್ಕಳ ಪ್ರತಿನಿಧಿಗಳು ಜಿಲ್ಲಾ ಮಟ್ಟದ ಮಕ್ಕಳ ಹಕ್ಕುಗಳ ಸಂಸತ್‌ನಲ್ಲಿ ಭಾಗವಹಿಸುವುದರಿಂದ ಗುಣಮಟ್ಟದ ಚರ್ಚೆ ನಡೆಸಲು ಅನುಕೂಲವಾಗುತ್ತದೆ ಹಾಗೆಯೇ ರಾಜ್ಯ ಮಟ್ಟದ ಮಕ್ಕಳ ಹಕ್ಕುಗಳ ಸಂಸತ್‌ಗೆ ಮಕ್ಕಳ ಪ್ರತಿನಿಧಿಗಳನ್ನು ಆಯ್ಕೆ ಮಾಡಲು ದೊಡ್ಡ ಸವಾಲು ಎದುರಾಗುವುದರಲ್ಲಿ ಸಂಶಯವಿಲ್ಲ! ಎಂದಿನಂತೆ ಈ ಬಾರಿಯೂ ಪ್ರತೀ ಜಿಲ್ಲೆಯಿಂದಲೂ ಮಕ್ಕಳು ಉತ್ತಮ ಪ್ರತಿನಿಧಿಗಳನ್ನೇ ಆಯ್ಕೆ ಮಾಡಿದ್ದು ಇಡೀ ಪ್ರಕ್ರಿಯೆಯ ಮೌಲ್ಯ ಹೆಚ್ಚಿದೆ.

ಚಿಕ್ಕಬಳ್ಳಾಪುರ ಜಿಲ್ಲಾ ಮಟ್ಟದ ಮಕ್ಕಳ ಹಕ್ಕುಗಳ ಸಂಸತ್ ನಲ್ಲಿ ಯುನಿಸೆಫ್‌ನ ಪ್ರತಿನಿಧಿಯಾಗಿ ಶ್ರೀ. ಪ್ರಸೂನ್ ಸೇನ್ ರವರು ಭಾಗವಹಿಸಿ, ಮಕ್ಕಳ ಹಕ್ಕುಗಳ ಸಂಸತ್‌ನ ಪ್ರಮುಖ ಉದ್ದೇಶ, ಯುನಿಸೆಫ್ ಹಾಗೂ ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರದ ಸಂಬಂಧ ಮುಂತಾದ ವಿಚಾರಗಳನ್ನು ಮಕ್ಕಳೊಂದಿಗೆ ಹಂಚಿಕೊಂಡರು.

ಕೊಡಗು, ಶಿವಮೊಗ್ಗ, ರಾಮನಗರ, ರಾಯಚೂರು, ಕೊಪ್ಪಳ, ಉತ್ತರ ಕನ್ನಡ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಜಿಲ್ಲೆಗಳಲ್ಲಿ ಸ್ಥಳೀಯ/ ಜಿಲ್ಲಾ ಆಯೋಜಕರೆ ಸಂಪನ್ಮೂಲ ವ್ಯಕ್ತಿಗಳಾಗಿ ಮಕ್ಕಳೊಂದಿಗೆ ಬೆರೆತು ಜಿಲ್ಲಾ ಮಟ್ಟದ ಮಕ್ಕಳ ಹಕ್ಕುಗಳ ಸಂಸತ್ ನಡೆಸಿದ್ದು ಈ ಬಾರಿಯ ವಿಶೇಷ.